

ಎತ್ತಿಕೊಂಡು ಹೆಂಗಸರ ವಾರ್ಡಿಗೆ 'ಟೀ ಟೀ ಚಾಯ ಚಾಯ' ಎಂದು ತನ್ನ ಮಲಯಾಳೀ ಕನ್ನಡದಲ್ಲಿ ಕೂಗುತ್ತಾ ಮರೆಯಾಗಿದ್ದ.

'ನಾನು ಬರುತ್ತೀನಿ ಸಾಹುಕಾರರೇ. ರಸ್ತೆಯಲ್ಲೇ ನಿಂಬೆಹಣ್ಣು ಗುಡ್ಡೆ ಸುರಿದಿಟ್ಟು ಬಂದಿದೀನಿ. ಏನಾಗಿದೆಯೋ ಕಾಣೆ' ಮಲಯಾಳಿ ಮಾದೇವಣ್ಣನ ಮಡದಿ ಸೋಲಿಗರ ಶಿವಮ್ಮ ತಾನೂ ಎದ್ದು ಹೊರಟಿದ್ದಳು. ಬ್ಯಾಂಡೇಜು ಕಟ್ಟಿಕೊಂಡು ಮಲಗಿದಲ್ಲಿಂದಲೇ ಅವಳನ್ನು ನೋಡಿದ್ದೆ. ಬಿಮ್ಮನಿಸಿ ಆಗಿದ್ದಳು. ಅವಳ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಲಯಾಳಿ ಮಾದೇವಣ್ಣನ ಎರಡನೆಯ ಕೂಸು. ಈಗಲಾದರೂ ಅವಳನ್ನು ರಿಜಿಸ್ಟ್ರಾರರ ಕಚೇರಿಯಲ್ಲಿ ಮದುವೆ ಮಾಡಿಸಿಕೋ ಮಾದೇವಣ್ಣ ಎಂದು ಬೇಡಿಕೊಂಡಿದ್ದೆ.

'ಅದೆಲ್ಲ ಆಗುವ ಮಾತಲ್ಲ. ನನ್ನಲ್ಲಿ ಏನೂ ದಾಖಲೆಗಳಿಲ್ಲ. ಸಾಯಲು ಹೊರಟಿದ್ದವನು ಸಾಯುವ ಮೊದಲು ಅವನ್ನೆಲ್ಲ ನದಿಗೆ ಬಿಸಾಕಿ ಬಂದಿರುವೆ ಈಗ ಹೊಸತಾಗಿ ಏನೂ ಮಾಡಲು ಆಗುವುದಿಲ್ಲ. ಅವಳಿಗೆ ಬೇಕಾದರೆ ಇರಬಹುದು. ಇಲ್ಲವಾದರೆ ವಾಪಾಸು ಕಾಡಿಗೆ ಹೋಗಬಹುದು' ಎಂದು ಖಡಕ್ಕಾಗಿ ಅಂದಿದ್ದ.

ತಾನು ಹೃದಯ ರೋಗಿಯಾಗಿರುವುದರಿಂದ ಯಾವಾಗ ಬೇಕಾದರೂ ಸಾಯುವುದು ತನ್ನ ಆಜನ್ಮಸಿದ್ಧ ಹಕ್ಕು ಅಂದುಕೊಂಡಿದ್ದ ಮಾದೇವಣ್ಣ ಆ ಅನಿಶ್ಚಿತತೆಯನ್ನು ತಾನು ಮಾತ್ರ ಅನುಭವಿಸದೆ ಸುತ್ತಮುತ್ತಲಿನ ಎಲ್ಲರಲ್ಲೂ ಹೇರುತ್ತಿದ್ದ. ತಾನು ಯಾವಾಗ ಬೇಕಾದರೂ ಸಾಯಬಹುದು. ಹಾಗಾಗಿ ಆಸ್ಪತ್ರೆಯ ಸುತ್ತಮುತ್ತಲ ಸುತ್ತಳತೆಯಲ್ಲೇ ಟೀ ಮಾರುತ್ತಿದ್ದ. ಉಳಿದ ಟೀಯನ್ನು ದೊಡ್ಡಾಸ್ಪತ್ರೆಯ ಕಲ್ಲು ಬಿಲ್ಡಿಂಗಿನಲ್ಲಿರುವ ರೋಗಿಗಳಿಗೆ ಉಚಿತವಾಗಿ ಹಂಚುತ್ತಿದ್ದ. ಹಾಗೆ ಹಂಚುವುದರ ನಡುವಲ್ಲಿ ಅಲ್ಲಿರುವ ಡಾಕ್ಟರುಗಳ ಬಳಿಯಲ್ಲಿ ತನ್ನ ಎದೆಯೊಡ್ಡಿ ತಾನಿನ್ನು ಎಷ್ಟು ದಿನಗಳು ಬದುಕಬಹುದು ಎಂದು ಕೇಳುತ್ತಿದ್ದ.

ಹಾಗೆ ಟೀ ಹಂಚುತ್ತಾ ಕಲ್ಲು ಬಿಲ್ಡಿಂಗಿನ ಒಳಗೆ ಬಂದಾಗಲೇ ಮಾದೇವಣ್ಣನಿಗೆ ನಾನು ಕಂಡಿದ್ದು. ನಿದ್ದೆ ಮಾಡುತ್ತಾ ಬೈಕು ಓಡಿಸಿದ ತಪ್ಪಿಗೆ ಬೇರೆ ಯಾರೂ ಶಿಕ್ಷೆ ಅನುಭವಿಸುವುದು ಬೇಡ, ಹೆಂಡತಿ ಸಾಕುಂತಲೆಗೂ ಹೇಳಿ ಅವಳಿಂದ ಬಯ್ಯಿಸಿಕೊಳ್ಳುವುದು ಬೇಡ ಎಂದು ಒಂಟಿ ಪಿಶಾಚಿಯಂತೆ ನೋವು ಉಣ್ಣುತ್ತಾ ಮಲಗಿದ್ದವನನ್ನು ನೋಡಿದ ಮಾದೇವಣ್ಣ ಸ್ಟುಡಿಯೋಗೆ ಹೋಗಿ ಸಾಕುಂತಲೆಗೆ ಹೇಳಿದ್ದ. ಅರಮನೆ ಒಳಗಿನ ಆನೆಕ್ಯಾಂಪಿಗೆ ಹೋಗಿ ಅಣ್ಣಯ್ಯನನ್ನೂ ಕರಕೊಂಡು ಮಾರ್ಕೆಟ್ಟಿನ ಎದುರು ನಿಂಬೆ ಹಣ್ಣು ಸುರುವಿಕೊಂಡು ಎಣಿಸುತ್ತಿದ್ದ ಬಿಮ್ಮನಿಸಿ ಶಿವಮ್ಮಳನ್ನೂ ಎಳೆದುಕೊಂಡು ಬಂದಿದ್ದ.

ಅವರು ಬರುವಷ್ಟರಲ್ಲಿ ಅದಾಗಲೇ ತನ್ನ ಸ್ಕೂಟಿ ಏರಿ ಬಂದು ತಲುಪಿದ್ದ ನನ್ನ ಮಡದಿ ಸಾಕುಂತಲೆ ತನ್ನ ಮಾಮೂಲು ಶೈಲಿಯಲ್ಲಿ ಗುಣಗಾನ ಮಾಡಲು ಶುರುಮಾಡಿದ್ದಳು.

'ಅಯ್ಯೋ ಬದುಕಿದ್ದೀಯಾ ಮೂದೇವಿ. ಸತ್ತೇ ಹೋದೆ ಅಂತ ಹೆದರಿಕೊಂಡು ಓಡಿ ಬಂದೆನಲ್ಲಾ ಮೂದೇವಿ. ದಾರಿಯಲ್ಲಿ ನಾನೇನಾದರೂ ಆಕ್ಸಿಡೆಂಟಾಗಿ ಸತ್ತೇ ಹೋಗಿದ್ದರೆ ಈಗ ನಿನ್ನನ್ನ ನೋಡಿಕೊಳ್ಳಲು ಯಾರು ಬದುಕಿರುತ್ತಿದ್ದರು ಮೂದೇವಿ ' ಸಾಕುಂತಲೆ ಸೋಬಾನೆಯ ಶೈಲಿಯಲ್ಲಿ ತನ್ನ ಎರಡೂ ಕೈಗಳನ್ನು ಎತ್ತಿಕೊಂಡು ಸೆರಗಿನಿಂದ ಗಾಳಿ ಬೀಸುತ್ತಿದ್ದರೆ ವಾರ್ಡಿನ ಎಲ್ಲರೂ ಆಕೆಯನ್ನು ಕಕ್ಕಾವಿಕ್ಕಿಯಾಗಿ ನೋಡುತ್ತಿದ್ದರು.

'ನೀನು ಏನು ಬೇಕಾದರೂ ಮಾಡು. ಆದರೆ ನಿನ್ನ ಅವೆರಡನ್ನು ಮಾತ್ರ ಸಾರ್ವಜನಿಕವಾಗಿ ತೋರಿಸಬೇಡ' ಎಂದು ಎಷ್ಟೇ ಬೇಡಿಕೊಂಡರೂ ಸಾಕುಂತಲೆ ರೊಚ್ಚಿಗೆದ್ದಾಗಲೆಲ್ಲಾ ಬೇಕಂತಲೇ ಅವುಗಳನ್ನು ದೊಡ್ಡದಾಗಿ ತೋರಿಸಿ ನನ್ನನ್ನು ಬೆಂಕಿಯ ಬಾಣಲೆಯಲ್ಲಿ ಹುರಿಯುತ್ತಿದ್ದಳು. ಅವಳಿಗೆ ನಿಜವಾಗಿಯೂ ಸಿಟ್ಟು ಬಂದಿತ್ತು. ಆಕೆಗೆ ನಾನು ಅಂದರೆ ಬಹಳ ದೊಡ್ಡ ಎಡವಟ್ಟುಗಳ ಒಂದು ದೊಡ್ಡ ಮೊತ್ತ.